# ಪ್ರೊ. ಬರಗೂರು ರಾಮಚಂದ್ರಪ್ಪ

ಡಾ. ಜಿ.ಎಸ್.ಎಸ್. ನಂತರ ೧೯೯೧ ರಿಂದ ಅಕಾಡೆಮಿಯ ಅಧ್ಯಕ್ಷರಾದವರು ಪ್ರೊ. ಬರಗೂರು ರಾಮಚಂದ್ರಪ್ಪ, ಇವರು ಕನ್ನಡದ ಪ್ರಗತಿಪರ ಚಿಂತನೆಯ ಲೇಖಕರಲ್ಲಿ ಪ್ರಮುಖರು. ೧೯೭೦ರ ದಶಕದಲ್ಲಿ ಕರ್ನಾಟಕ ಒಳಗೊಂಡಂತೆ ದೇಶದಲ್ಲಿ ಮೂಡಿದ ಹೊಸ ರಾಜಕೀಯ ಸನ್ನಿವೇಶದಲ್ಲಿ ಹುಟ್ಟಿಕೊಂಡ ಬಂಡಾಯ ಸಾಹಿತ್ಯ ಸಂಘಟನೆಗೆ ಸೈದ್ಧಾಂತಿಕ ರೂಪ ಕೊಟ್ಟ ಪ್ರಮುಖರಲ್ಲಿ ಬರಗೂರರೂ ಒಬ್ಬರು. ಈ ಕ್ಷೇತ್ರಕ್ಕೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ಇವರು, ಗಟ್ಟಿಯಾದ ಸೈದ್ಧಾಂತಿಕ ತಳಹದಿಯ ಮೇಲೆ ಬರೆದರು, ಮಾತನಾಡಿದರು.

ಬರಗೂರರು ಕಾವ್ಯ, ಕಥೆ, ವಿಮರ್ಶೆ, ನಾಟಕ, ಸಿನಿಮಾ – ಹೀಗೆ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ. ೧೯೯೧ರಿಂದ ೧೯೯೫ರವರೆಗಿನ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷಾವಧಿಯಲ್ಲಿ ಬರಗೂರರು ಕೈಗೊಂಡ ಪ್ರಗತಿಪರ ಯೋಜನೆಗಳು ಹಲವಾರು.

ಜಿ.ಎಸ್. ಶಿವರುದ್ರಪ್ಪ ಅವರ ಅಧ್ಯಕ್ಷತೆಯ ಅವಧಿ ೧೯೯೦ರ ಜು. ೩೦ಕ್ಕೆ ಮುಗಿದಿತ್ತು. ಕಾರಣಾಂತರದಿಂದ ೧೯೯೧ರ ಅ.೩೦ ವರೆಗೆ ಹೊಸ ಅಕಾಡೆಮಿ ರಚನೆಯಾಗಲಿಲ್ಲ. ಆಗ ರಾಜ್ಯ ಸರಕಾರವು ಸಾಹಿತಿ, ಚಿಂತಕ ಪ್ರೊ. ಬರಗೂರು ರಾಮಚಂದ್ರಪ್ಪ ಅವರನ್ನು ಅಕಾಡೆಮಿಗೆ ಅಧ್ಯಕ್ಷರನ್ನಾಗಿ ನೇಮಿಸಿತು. ಬರಗೂರರು ಅಧ್ಯಕ್ಷರಾದ ಮೊದಲ ಐದಾರು ತಿಂಗಳಲ್ಲಿ ಅಕಾಡೆಮಿಯು ಸ್ವತಂತ್ರವಾಗಿ ಆರು ಪ್ರಬುದ್ಧ ವಿಚಾರ ಸಂಕಿರಣಗಳನ್ನು ನಡೆಸಿತು. 'ವಸಾಹತುಶಾಹಿ' ಸಂಸ್ಕೃತಿಯ ಅನುಭವ ಮತ್ತು ಡಾ. ಚಂದ್ರಶೇಖರ ಕಂಬಾರರ ಸಾಹಿತ್ಯ,' 'ಸಮಕಾಲೀನ ಸಾಹಿತ್ಯ ಸಂಸ್ಕೃತಿ ಮತ್ತು ಅನುಪಮಾ ನಿರಂಜನರ ಸಾಹಿತ್ಯ,' 'ಬಸವರಾಜ ಕಟ್ಟೀಮನಿ ಅವರ ಸಾಹಿತ್ಯ,' ಸಂಸ್ಕೃತಿಯ ಸ್ಥಿತ್ಯಂತರ ಮತ್ತು ಕೃಷ್ಣ ಆಲನಹಳ್ಳಿಯವರ ಸಾಹಿತ್ಯ,' ಶಂ. ಬಾ. ಜೋಶಿಯವರ ಸಾಹಿತ್ಯ ಚಿಂತನೆ,' 'ರಾಷ್ಟ್ರೀಯ ಚಳವಳಿ ಮತ್ತು ಗೊರೂರು ಅವರ ಸಾಹಿತ್ಯ'– ಈ ವಿಚಾರ ಸಂಕಿರಣಗಳು ಬೆಂಗಳೂರು, ಬೆಳಗಾವಿ, ಮೈಸೂರು, ಧಾರವಾಡ ಮತ್ತು ಹಾಸನಗಳಲ್ಲಿ ನಡೆದವು. ಹಾಗೆಯೇ ಇತರ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಮುಲ್ಕ್‌ರಾಜ್ ಆನಂದ್ ಅವರೊಡನೆ ಸಂವಾದ, ಪಟ್ಟದಕಲ್ಲು ನವರಸಪುರ ಉತ್ಸವ, ಕರಾವಳಿ ಸಂಸ್ಕೃತಿ ಉತ್ಸವ, ಆದಿವಾಸಿ ಜಾನಪದ ಮೇಳ, ಬದಲಾಗುತ್ತಿರುವ ಶತಮಾನದಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ, ದಕ್ಷಿಣ ವಲಯ ಸಾಹಿತಿಗಳ ಸಮಾವೇಶಗಳಂತಹ ವಿಶಿಷ್ಟ ಕಾರ್ಯಕ್ರಮಗಳೂ ಜರುಗಿದವು.

ಮದ್ರಾಸ್‌ನ (ಚೆನ್ನೈ) ಯುಎಸ್‌ಎಸ್ ಸಹಯೋಗದೊಂದಿಗೆ ಅಮೆರಿಕದ ಪ್ರಸಿದ್ಧ ಕವಯತ್ರಿ ಜಾನೆ ಕೆನ್‌ಯೋನ್ ಅವರ ಕವಿತಾ ವಾಚನವನ್ನು ಏರ್ಪಡಿಸಿದ್ದು ಗಮನಾರ್ಹ ಸಂಗತಿ. ಈ ಕಾರ್ಯಕ್ರಮದಲ್ಲಿ ಕನ್ನಡದ ಅನೇಕ ಕವಿಗಳು, ವಿಮರ್ಶಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ನಂತರದ ಆರು ತಿಂಗಳ ಅವಧಿಯಲ್ಲಿ ವೈವಿಧ್ಯಮಯ ಚಟುವಟಿಕೆಗಳನ್ನು ಅಕಾಡೆಮಿ ಹಮ್ಮಿಕೊಂಡಿತು. 'ನಿರಂಜನರ ಸಾಹಿತ್ಯ ಮತ್ತು ಸಮಕಾಲೀನತೆ', 'ದಿನಕರ ದೇಸಾಯಿಯವರ ಸಾಹಿತ್ಯ' ಕುರಿತ ವಿಚಾರ ಸಂಕಿರಣಗಳು ನಡೆದವು. ತುಮಕೂರಿನಲ್ಲಿ ನಡೆದ 'ಅಂಬೇಡ್ಕರ್ ಜನ್ಮಶತಾಬ್ದಿ, ಕವಿಗೋಷ್ಠಿ' ರಾಜ್ಯ ಮಟ್ಟದ್ದಾಗಿದ್ದು ಇಡೀ ನಾಡಿನ ಗಮನ ಸೆಳೆದ ಪ್ರಮುಖ ಕಾರ್ಯಕ್ರಮವಾಯಿತು. 'ಅನ್ಯಜ್ಞಾನ ಶಿಸ್ತುಗಳ ಮೂಲಕ ಕನ್ನಡ ಸಾಹಿತ್ಯ' ಎಂಬ ಒಂದು ವಾರದ ಕಮ್ಮಟವನ್ನು ಬೆಂಗಳೂರಿನ ವೈಎಂಸಿಎ ಸಭಾಂಗಣದಲ್ಲಿ ನಡೆಸಿದ್ದೂ ಒಂದು ವಿಶೇಷವೇ. ಮನಃಶಾಸ್ತ್ರ, ಸಮಾಜಶಾಸ್ತ್ರ, ತತ್ವಶಾಸ್ತ್ರ, ಭಾಷಾಶಾಸ್ತ್ರ ಇತಿಹಾಸ – ಮುಂತಾದ ಶಾಸ್ತ್ರಗಳೊಂದಿಗೆ ಸಾಹಿತ್ಯಕ್ಕಿರುವ ಸಂಬಂಧವನ್ನು ಕುರಿತ ಚರ್ಚೆಗಳ ಮೂಲಕ ಕನ್ನಡ ಸಾಹಿತ್ಯವನ್ನು ಅರ್ಥೈಸಿಕೊಳ್ಳುವ ಹಿನ್ನೆಲೆಯಲ್ಲಿ ಈ ಕಮ್ಮಟ ಫಲಪ್ರದವಾಯಿತು.

೧೯೯೨-೯೩ನೇ ಸಾಲಿನಲ್ಲಿ ಅಕಾಡೆಮಿಯ ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ, ಉಪ ಸಂಸ್ಕೃತಿಗಳ ಅಧ್ಯಯನ, ಅಂತರ್‌ಶಿಸ್ತೀಯ ಅಧ್ಯಯನ – ಎಂಬ ಮೂರು ನೂತನ ಯೋಜನೆಗಳನ್ನು ರೂಪಿಸಿತು. ಇದನ್ನು ೧೩ ಜೂ. ೧೯೯೨ ರಂದು ಯುವನಿಕಾದಲ್ಲಿ ವಿಧ್ಯುಕ್ತವಾಗಿ ಉದ್ಘಾಟಿಸಿದವರು ಪಶ್ಚಿಮ ಬಂಗಾಳದ ಪ್ರಸಿದ್ಧ ಲೇಖಕಿ ಮಹಾಶ್ವೇತಾದೇವಿ. ಇದನ್ನು ಕಾರ್ಯರೂಪಕ್ಕೆ ತರಲು ೧೯೯೨ರ ಜೂ. ೧೩, ೧೪ರಂದು ಮೊದಲ ಸುತ್ತಿನ ಚರ್ಚೆಯಲ್ಲಿ ಪಲ್ಗೊಳ್ಳಲು ನಾಡಿನ ಸುಮಾರು ಎಪ್ಪತ್ತಕ್ಕೂ ಮೀರಿದ ಸಂಖ್ಯೆಯಲ್ಲಿ ಹೆಸರಾಂತ ಲೇಖಕರು ಆಗಮಿಸಿದ್ದರು. ಅಕಾಡೆಮಿಯು ಇದನ್ನು ಗ್ರಂಥರೂಪದಲ್ಲಿ ಹೊರತಂದಿತು.

ಬರಗೂರು ರಾಮಚಂದ್ರಪ್ಪ ಅವರ ಅಧ್ಯಕ್ಷತೆಯ ಅವಧಿಯಲ್ಲಿ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡ ಪ್ರಮುಖ ಮೂರು ಯೋಜನೆಗಳಲ್ಲಿ ಮೊದಲನೆಯದಾಗಿ – 'ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ ಮಾಲೆ'ಯಲ್ಲಿ ೧೨ ಸಂಪುಟಗಳನ್ನು ಹೊರತಂದಿತು. ಅಧ್ಯಯನಶೀಲರಿಗೆ ಇವು ಅತ್ಯಂತ ಉಪಯುಕ್ತ ಆಕರ ಗ್ರಂಥಗಳಾಗಿವೆ. ಎರಡನೆಯದು – ಉಪಸಂಸ್ಕೃತಿಗಳ ಅಧ್ಯಯನ ಯೋಜನೆ ಮಾಲೆ. ಈ ಎರಡು ಯೋಜನೆಗಳೊಂದಿಗೆ ಚಾಲನೆಗೊಂಡ ೩ನೆಯ ಯೋಜನೆ – ಅಂತರಶಿಸ್ತೀಯ ಅಧ್ಯಯನ. ಸಾಹಿತ್ಯದೊಂದಿಗೆ ಸಂಬಂಧವಿರುವ ಅನ್ಯಜ್ಞಾನ ಶಿಸ್ತುಗಳ ಬಗ್ಗೆ ಕುರಿತು ವಿವೇಚಿಸುವುದು ಮತ್ತು ವ್ಯಾಖ್ಯಾನ ಮಾಡುವುದು. ಅಧ್ಯಕ್ಷರ ಮಾರ್ಗದರ್ಶನದಲ್ಲಿ ರೂಪುಗೊಂಡ ಸಂಪಾದಕ ಮಂಡಳಿಯು ಮೊದಲ ಹಂತವಾಗಿ ೧೮ ಪುಸ್ತಕಗಳನ್ನು ಬರೆಸಿ ಪ್ರಕಟಿಸಲು ನಿರ್ಧರಿಸಲಾಯಿತು. ಇದು ಸಹ ಕೈಗೂಡಿ ಬರಗೂರರ ಅವಧಿಯಲ್ಲಿ ಹತ್ತು ಕೃತಿಗಳು ಹೊರಬಂದವು.

ಕನ್ನಡ ಸಂಸ್ಕೃತಿ ಹಾಗೂ ವಿಶ್ವ ಸಂಸ್ಕೃತಿಯನ್ನು ಸಾಹಿತ್ಯಾಸಕ್ತರಿಗೆ ತಿಳಿಸಿಕೊಡುವ ಸಲುವಾಗಿ ಬರಗೂರರ ಅವಧಿಯಲ್ಲಿ ೧೯೯೩-೯೪ ಸಾಲಿಗೆ ಇನ್ನೊಂದು ನೂತನ ಯೋಜನಾ ಸರಣಿಯನ್ನು ರೂಪಿಸಲಾಯಿತು. ೧.ಮರೆಯಬಾರದ ಬರಹಗಾರರು – ಸಾಹಿತ್ಯ ವಾಚಿಕೆಗಳು. ೨. ಸಂಸ್ಕೃತಿ – ಸಂದರ್ಭಕೋಶ. ೩. ನೊಬೆಲ್ ಪ್ರಶಸ್ತಿ ವಿಜೇತರ ವಾಚಿಕೆಗಳು. ೪. ಜ್ಞಾನಪೀಠ ಪ್ರಶಸ್ತಿ ವಿಜೇತರು, ಇವೇ ಯೋಜನೆಗಳು.

ಬರಗೂರರ ಅಧ್ಯಕ್ಷತೆಯಲ್ಲಿ ನೂತನ ಅಕಾಡೆಮಿ ರಚನೆಯಾದ ಮೊದಲ ೯ ತಿಂಗಳಲ್ಲಿ ಹಲವಾರು ವೈವಿಧ್ಯಮಯ ಕಮ್ಮಟಗಳು, ಶಿಬಿರಗಳು ಹಾಗೂ ವಿಚಾರ ಸಂಕಿರಣಗಳು ನಡೆದವು. ಈ ಕಾರ್ಯಕ್ರಮಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಸಂಕಲಿಸಿದ ಪುಸ್ತಕಗಳು, ವಾರ್ಷಿಕ ಸಂಕಲನ, ವಿಶೇಷ ಸಂಕಲನ ಹೀಗೆ ಎಲ್ಲಾ ೨೫ ಪುಸ್ತಕಗಳನ್ನು ಪ್ರಕಟಿಸಿ ಜಿ.ಎಸ್.ಎಸ್. ಪರಂಪರೆಯನ್ನು ಮುಂದುವರಿಸಲಾಯಿತು.

ಬರಗೂರು ರಾಮಚಂದ್ರಪ್ಪ ತಮ್ಮ ಅವಧಿಯಲ್ಲಿ ಇನ್ನೂ ಕೆಲವು ಪ್ರಮುಖ ಯೋಜನೆಗಳನ್ನು ಕೈಗೊಂಡರು. ಅವುಗಳಲ್ಲಿ ಮೊದಲನೆಯದು – ಹಳ್ಳಿಯ ಅಧ್ಯಯನ ಮಾಲೆ ಕೆಲವು ಲೇಖಕರನ್ನು ಹಳ್ಳಿಗಳಿಗೆ ಕಳುಹಿಸಿ, ಅಲ್ಲಿ ಅವರು ಕನಿಷ್ಟ ಒಂದು ತಿಂಗಳಾದರೂ ವಾಸಿಸುವಂತೆ ಮಾಡಿ ಅವರಿಂದ ಗ್ರಾಮೀಣ ಬದುಕಿನ ಕುರಿತಾಗಿ ಕೃತಿಗಳನ್ನು ಬರೆಯಿಸುವುದು, ಈ ಯೋಜನೆಯ ಉದ್ದೇಶ. ಇದೊಂದು ನೂತನ ಹಾಗೂ ವಿಶಿಷ್ಟ ಪ್ರಯೋಗವಾಗಿತ್ತು. 'ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ', ಸು.ರಂ. ಎಕ್ಕುಂಡಿಯವರ ಕಾವ್ಯ', 'ವಚನ ಸಾಹಿತ್ಯದಲ್ಲಿ ಕೆಳವರ್ಗದ ಆಶಯ' ಮತ್ತು 'ಅಭಿವ್ಯಕ್ತಿ', ಕನ್ನಡ ತತ್ವಪದಕಾರರು,' ಕಾವ್ಯ ಸೃಷ್ಟಿಯ ಸ್ವರೂಪ', 'ಸಂಶೋಧನೆಯ ಸ್ವರೂಪ', 'ಕವಿತೆ ಓದುವ ವಿಧಾನ' ಅಂತಹ ಕೃತಿಗಳಲ್ಲಿ ಕೆಲವು, ಇತರೆ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ 'ಕನ್ನಡ ಮತ್ತು ಮರಾಠಿ ಸಾಹಿತ್ಯದ ಇತ್ತೀಚಿನ ಒಲವುಗಳು', ಪಾ.ವೆಂ. ಆಚಾರ್ಯ ಸಂಸ್ಮರಣೆ', 'ಕನ್ನಡ ಸಾಹಿತ್ಯದಲ್ಲಿ ಕನ್ನಡ', 'ಭಾಷಾಂತರ ನೆಲೆಗಳು' ಮುಂತಾದ ವಿಷಯಗಳನ್ನಾಧರಿಸಿ ವಿಚಾರ ಸಂಕಿರಣ, ಕಮ್ಮಟಗಳೂ ನಡೆದವು. ಬರಗೂರು ರಾಮಚಂದ್ರಪ್ಪ ತಮ್ಮ ಸುಮಾರು ಮೂರುವರೆ

ವರ್ಷಗಳ ಅಧ್ಯಕ್ಷತೆಯ ಅವಧಿಯಲ್ಲಿ ಸಾಹಿತ್ಯ ಅಕಾಡೆಮಿ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಂಡರು.